ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

[ಕರ್ನಾಟಕ ಸರ್ಕಾರದ ಸಂಪೂರ್ಣ ಸಾಮ್ಯಕ್ಕೆ ಒಳಪಟ್ಟಿದೆ]
ಕಂಪನಿ ಕಾರ್ಯಾಲಯ, ನವನಗರ, ಹುಬ್ಬಳ್ಳಿ- 580 025.
Company Identity Number[CIN]: U04010KA2002PLC030437

# ನೇಮಕಾತಿ- ತಾತ್ಕಾಲಿಕ ಆಯ್ಕೆ ಪಟ್ಟಿ[ಹೆಚ್ಚುವರಿ] ಪ್ರಕಟಣೆ

## ಅಧಿಸೂಚನೆ

ಕ್ರಮ ಸಂಖ್ಯೆ: ಹೆಚ್.ಸಿ.ಓ.-07/ಸಿ.-81/2017-18, ದಿನಾಂಕ: **21ನೇ ಅಕ್ಟೋಬರ್, 2019**.

ವಿಷಯ: ಸಹಾಯಕ ಹುದ್ದೆಯಲ್ಲಿ ಬಾಕಿ ಉಳಿದಿರುವ ಪ್ರವರ್ಗ/ ಕೋಟಾಗಳ ತಾತ್ಕಾಲಿಕ ಆಯ್ಕೆ ಪಟ್ಟಿ [ಹೆಚ್ಚುವರಿ] ಯನ್ನು ಪ್ರಕಟಿಸುವ ಕುರಿತು.

ಉಲ್ಲೇಖ:
1. ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ ಬಿ16/ 40360/ 2016-17, ದಿನಾಂಕ: 08.09.2016.
2. ನೇಮಕಾತಿ-ಅಂತಿಮ ಆಯ್ಕೆ ಪಟ್ಟಿ ಪ್ರಕಟಣೆ ಅಧಿಸೂಚನೆ: ಹುವಿಸಕಂನಿ/ ಪ್ರವ್ಯ/ ಲೆ[ಆ]/ ಸಲೆ[ಆ]/ ಹಿಸ[ಆ-1]/ ನೇಪ್ರ/ ವಿವ-05/ 2016-17/ CYS-6105, ದಿನಾಂಕ: 13.03.2018.
3. ನೇಮಕಾತಿ-ಅಂತಿಮ ಆಯ್ಕೆ ಪಟ್ಟಿ [ಹೆಚ್ಚುವರಿ] ಪ್ರಕಟಣೆ ಅಧಿಸೂಚನೆ: ಹುವಿಸಕಂನಿ/ ಪ್ರವ್ಯ[ಆ]/ ಲೆ[ಆ]/ ಸಲೆ[ಆ]/ ಹಿಸ[ಆ-1]/ ನೇಪ್ರ/ ವಿವ-05/ 2016-17, ದಿನಾಂಕ: 31.10.2018

********

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ ಬಿ16/ 40360/ 2016-17, ದಿನಾಂಕ: 08.09.2016 ಕ್ಕೆ ಅನುಗುಣವಾಗಿ, ಹು.ವಿ.ಸ.ಕಂ.ನಿ.ಯ ನೇಮಕಾತಿ-ಅಂತಿಮ ಆಯ್ಕೆ ಪಟ್ಟಿ ಪ್ರಕಟಣೆಯನ್ನು ಅಧಿಸೂಚನೆ ಸಂಖ್ಯೆ: ಹುವಿಸಕಂನಿ/ ಪ್ರವ್ಯ/ ಲೆ[ಆ]/ ಸಲೆ[ಆ]/ ಹಿಸ[ಆ-1]/ ನೇಪ್ರ/ ವಿವ-05/ 2016-17/ CYS-6105, ದಿನಾಂಕ: 13.03.2018 ರಲ್ಲಿ ಹಾಗೂ ನೇಮಕಾತಿ-ಅಂತಿಮ ಆಯ್ಕೆ ಪಟ್ಟಿ [ಹೆಚ್ಚುವರಿ] ಪ್ರಕಟಣೆಯನ್ನು ಅಧಿಸೂಚನೆ: ಹುವಿಸಕಂನಿ/ ಪ್ರವ್ಯ[ಆ]/ ಲೆ[ಆ]/ ಸಲೆ[ಆ]/ ಹಿಸ[ಆ-1]/ ನೇಪ್ರ/ ವಿವ-05/ 2016-17, ದಿನಾಂಕ: 31.10.2018 ರಲ್ಲಿ ಪ್ರಕಟಿಸಲಾಗಿರುತ್ತದೆ.

ಪ್ರಕಟಿತ ಹುದ್ದೆಗಳಲ್ಲಿ ಅರ್ಹ ಅಭ್ಯರ್ಥಿಗಳ ಕೊರತೆ ಇರುವ ರಿಕ್ತ ಸ್ಥಾನಗಳಿಗೆ, 1:2 ಅನುಪಾತದ ಶ್ರೇಷ್ಠತೆಯ ಕೆಳಗಿರುವ ಆಯಾ ಸಂಬಂಧಿಸಿದ ಪ್ರವರ್ಗ/ ಮೀಸಲಾತಿ ಕೋಟಾದಡಿಯಲ್ಲಿ ಅರ್ಹತೆಗನುಗುಣವಾಗಿ ದಾಖಲಾತಿ ಪರಿಶೀಲನೆ ಹಾಗೂ ದಿನಾಂಕ: 05.02.2018, ದಿನಾಂಕ: 17.03.2018, ದಿನಾಂಕ: 14.09.2018 ಮತ್ತು ದಿನಾಂಕ: 12.11.2018 ರಂದು ಕೈಗೊಳ್ಳಲಾಗಿರುತ್ತದೆ. ಅಂಗವಿಕಲ ಅರ್ಹತೆಯಲ್ಲಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳನ್ನು ಕ.ವಿ.ಪ್ರ.ನಿ.ನಿ.ಯ ಸಹಯೋಗದೊಂದಿಗೆ, ಕೇಂದ್ರಿಯವಾಗಿ ಬೆಂಗಳೂರಿನ ವಿಕ್ಟೋರಿಯಾ ಹಾಗೂ ಮಿಂಟೋ ಕಣ್ಣಾಸ್ಪತ್ರೆಗಳಲ್ಲಿ ಅಂಗವಿಕಲತೆಯ ಕುರಿತಂತೆ, ವೈದ್ಯಕೀಯ ತಪಾಸಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ದಾಖಲಾತಿ ಮತ್ತು ವೈದ್ಯಕೀಯ ತಪಾಸಣಾ ವರದಿಗಳನ್ನಾಧರಿಸಿ, ಸಹಾಯಕ ಹುದ್ದೆಗೆ, ಕಾಲ ಕಾಲಕ್ಕೆ ಚಾಲ್ತಿಯಲ್ಲಿರುವ ಕರ್ನಾಟಕ ರಾಜ್ಯ ಸರಕಾರದ ನಿಯಮಾವಳಿಗಳನುಸಾರ ಅರ್ಹತೆ ಹಾಗೂ ಶ್ರೇಷ್ಠತೆಯ ಆಧಾರದಲ್ಲಿ, ಆಯ್ಕೆಯಾಗಿರುವ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿ [ಹೆಚ್ಚುವರಿ] ಯನ್ನು, ಕಟ್–ಆಫ್ [Cut-Off] ಅಂಕಗಳೊಂದಿಗೆ ಹು.ವಿ.ಸ.ಕಂ.ನಿ. ಅಂತರ್ಜಾಲದಲ್ಲಿ ಪ್ರಕಟಿಸಲಾಗಿದೆ.

ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿ [ಹೆಚ್ಚುವರಿ] ಗೆ ಸಮಂಜಸವಾದ ಆಕ್ಷೇಪಣೆಗಳಿದ್ದಲ್ಲಿ, 1:2 ರ ಅನುಪಾತ ಹಾಗೂ ದಿನಾಂಕ: 05.02.2018, ದಿನಾಂಕ: 17.03.2018, ದಿನಾಂಕ: 14.09.2018 ಮತ್ತು ದಿನಾಂಕ: 12.11.2018 ರಂದು ದಾಖಲಾತಿ ಪರಿಶೀಲನೆಗಾಗಿ ಹಾಜರಾದ ಅಭ್ಯರ್ಥಿಗಳು ಮಾತ್ರ, ಸೂಕ್ತ ವಿವರ ಹಾಗೂ ದಾಖಲಾತಿಗಳೊಂದಿಗೆ, ತಮ್ಮ ಹೆಸರು, ಅರ್ಜಿ ಸಂಖ್ಯೆ ಹಾಗೂ ಅರ್ಜಿ ಸಲ್ಲಿಸಿದ್ದ ಹುದ್ದೆಯ ಹೆಸರಿನೊಂದಿಗೆ ಕಂಪನಿಯ ಈ-ಮೇಲ್ ಐಡಿ hescomrecruitment@gmail.com ಗೆ ದಿನಾಂಕ: 31ನೇ ಅಕ್ಟೋಬರ್, 2019 ರೊಳಗೆ ಸಲ್ಲಿಸಬಹುದಾಗಿದೆ.

**[ಪು.ತಿ.ನೋ.]**

ಆನ್-ಲೈನ್ [ಈ-ಮೇಲ್] ಮೂಲಕ ಹೊರತುಪಡಿಸಿ, ಇನ್ನಾವುದೇ ಮಾರ್ಗದಿಂದ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ನಿಗದಿತ ದಿನಾಂಕದ ನಂತರ ಸಲ್ಲಿಸಲಾಗುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಅಂಗವಿಕಲ ಕೋಟಾದಡಿಯಲ್ಲಿರುವ 1:2 ಅನುಪಾತ ಹಾಗೂ ದಿನಾಂಕ: 05.02.2018, ದಿನಾಂಕ: 17.03.2018, ದಿನಾಂಕ: 14.09.2018 ಮತ್ತು ದಿನಾಂಕ: 12.11.2018 ರಂದು ದಾಖಲಾತಿ ಪರಿಶೀಲನೆ ಹಾಗೂ ವೈದ್ಯಕೀಯ ತಪಾಸಣೆಗೆ ಹಾಜರಾದ ಅಭ್ಯರ್ಥಿಗಳ ದೈಹಿಕ ಪರೀಕ್ಷೆಗಳನ್ನು ಕ.ವಿ.ಪ್ರ.ನಿ.ನಿ.ಯ ಸಹಯೋಗದೊಂದಿಗೆ, ಕೇಂದ್ರಿಯವಾಗಿ ಬೆಂಗಳೂರಿನ ವಿಕ್ಟೋರಿಯಾ ಹಾಗೂ ಮಿಂಟೋ ಕಣ್ಣಾಸ್ಪತ್ರೆಯಲ್ಲಿ ಕೈಗೊಳ್ಳಲಾಗಿರುತ್ತದೆ. ಹಲವಾರು ಅಭ್ಯರ್ಥಿಗಳು ಬಹು ವಿಧವಾದ ಅಂಗವೈಕಲ್ಯತೆಯನ್ನು, ಶೇಕಡ 40 ಕ್ಕಿಂತ ಕಡಿಮೆ ಅಂಗವೈಕಲ್ಯತೆಯನ್ನು ಮತ್ತು ಅಂಗವಿಕಲ ಕೋಟಾದಡಿಗೆ ನಿಗಧಿ ಪಡಿಸಿದ ಅಂಗವೈಕಲ್ಯತೆಯನ್ನು ಹೊರತುಪಡಿಸಿ ಬೇರೆ ಅಂಗವೈಕಲ್ಯತೆಗಳು ಕಂಡು ಬಂದಿರುತ್ತವೆ. ಇಂತಹ ಅಭ್ಯರ್ಥಿಗಳನ್ನು ಅಂಗವಿಕಲ ಕೋಟಾದಡಿಯಿಂದ ಅನರ್ಹಗೊಳಿಸಲಾಗಿದೆ.

ಇದರಿಂದಾಗಿ, ಸಹಾಯಕ ಹುದ್ದೆಯ ಪರಿಶಿಷ್ಠ ಜಾತಿ ರಲ್ಲಿಯ ಅಂಗವಿಕಲ ಕೋಟಾದಡಿಯಲ್ಲಿ ಒಬ್ಬ ಅಭ್ಯರ್ಥಿಯ ಕೊರತೆಯು ಇರುತ್ತದೆ. ಇಂತಹ ಸಹಾಯಕ ಹುದ್ದೆಯ ರಿಕ್ತ ಸ್ಥಾನಗಳಿಗಾಗಿ 1:2 ಅನುಪಾತ ಹಾಗೂ ದಿನಾಂಕ: 05.02.2018, ದಿನಾಂಕ: 17.03.2018, ದಿನಾಂಕ: 14.09.2018 ಮತ್ತು ದಿನಾಂಕ: 12.11.2018 ರಂದು ದಾಖಲಾತಿ ಪರಿಶೀಲನೆ ಹಾಗೂ ವೈದ್ಯಕೀಯ ತಪಾಸಣೆಗೆ ಹಾಜರಾದ ಅಭ್ಯರ್ಥಿಗಳ ಶ್ರೇಷ್ಠತೆಯ ಕೆಳಗಿರುವವರನ್ನು ಅರ್ಹತೆ ಹಾಗೂ ಶ್ರೇಷ್ಠತೆಯ ಮತ್ತು ಕಾಲ ಕಾಲಕ್ಕೆ ಚಾಲ್ತಿಯಲ್ಲಿರುವ ಕರ್ನಾಟಕ ರಾಜ್ಯ ಸರಕಾರದ ನಿಯಮಾವಳಿಗಳನುಸಾರ ಅರ್ಹತೆ ಆಧಾರದಲ್ಲಿ, ಅಭ್ಯರ್ಥಿಗಳ ಪಟ್ಟಿಯನ್ನು, ಹು.ವಿ.ಸ.ಕಂ.ನಿ. ಅಂತರ್ಜಾಲದಲ್ಲಿ ಪ್ರಕಟಿಸಲಾಗಿದೆ. ಸದರಿ ಅಭ್ಯರ್ಥಿಗಳನ್ನು ದಿನಾಂಕ: 31ನೇ ಅಕ್ಟೋಬರ್, 2019 ರಂದು ಬೆಳ್ಳಿಗ್ಗೆ 11:00 ಗಂಟೆಗೆ ಹು.ವಿ.ಸ.ಕಂ.ನಿ. ಕಂಪನಿ ಕಾರ್ಯಾಲಯ, ನವನಗರ, ಹುಬ್ಬಳ್ಳಿಯಲ್ಲಿ ದಾಖಲಾತಿ ಪರಿಶೀಲನೆಗೆ On-Line ಅರ್ಜಿಯಲ್ಲಿ ಸಲ್ಲಿಸಿರುವ ಮೂಲ ದಾಖಲಾತಿಗಳು ಹಾಗೂ ದೃಢೀಕೃತ ಪ್ರತಿಗಳೊಂದಿಗೆ ಹಾಜರಾಗಲು ಸೂಚಿಸಿದೆ. ಸದರಿ ಅಭ್ಯರ್ಥಿಗಳ ಅಂಗವಿಕಲತೆಯ ವೈದ್ಯಕೀಯ ತಪಾಸಣೆಯ ದಿನಾಂಕವನ್ನು ಮುಂದಿನ ದಿನಗಳಲ್ಲಿ ಹು.ವಿ.ಸ.ಕಂ.ನಿ. ಅಂತರ್-ಜಾಲದಲ್ಲಿ ಪ್ರಕಟಿಸಲಾಗುತ್ತದೆ.

ಅಭ್ಯರ್ಥಿಗಳು ದಾಖಲಾತಿ ಪರಿಶೀಲನಾ ಸಮಯದಲ್ಲಿ, ಮೂಲ ದಾಖಿತಿಗಳು ಮತ್ತು ಅದರ ಛಾಯಾ ಪ್ರತಿಗಳನ್ನು [Photo-Copy/ Xerox] ಹಾಜರು ಪಡಿಸತಕ್ಕದ್ದು. ಅಭ್ಯರ್ಥಿಗಳಿಗೆ ಇನ್ನ್ಯಾವುದೇ ರೀತಿಯಲ್ಲೂ ಕರೆ ಪತ್ರಗಳನ್ನು ರವಾನಿಸಲಾಗುವುದಿಲ್ಲ. ದಾಖಲಾತಿಗಳ ಪರಿಶೀಲನೆಗೆ ಪರ್ಯಾಯ ದಿನಾಂಕದ ಕೋರಿಕೆಯನ್ನು ಪರಿಗಣಿಸಲಾಗುವುದಿಲ್ಲ.

**ನಿಗದಿತ ದಿನಾಂಕದಂದು ದಾಖಲಾತಿ ಪರಿಶೀಲನೆಗೆ ಹಾಜರಾಗದ ಅಭ್ಯರ್ಥಿಗಳನ್ನು ಆಯ್ಕೆಗಾಗಿ ಪರಿಗಣಿಸುವುದಿಲ್ಲ.**

ಪ್ರಧಾನ ವ್ಯವಸ್ಥಾಪಕರು

**[ಆಡಳಿತ ಮತ್ತು ಮಾ.ಸಂ.ಅ]**